


ಕೊಲೆ ಮಾಡಿದ್ದಾನೆಂದು ಆರೋಪಿಸಿ, ಆತನನ್ನು ಬಂಧಿಸಿದ್ದರು. ಆತನದ್ದು ವಿಷಮ ದಾಂಪತ್ಯ. ಚೆಟ್ಟಿಯಪ್ಪ ಬಡ ಕುಟುಂಬದವನು. ಮಿಥಿಲಾ ಶ್ರೀಮಂತನ ಮಗಳು. ಗಂಡ ಹೆಂಡಿರ ನಡುವೆ ಹನ್ನೆರಡು ವರ್ಷಗಳ ವಯಸ್ಸಿನ ವ್ಯತ್ಯಾಸವಿದ್ದು, ಅವರಿಬ್ಬರಲ್ಲಿ ಜಗಳವು ಮಾಮೂಲಾಗಿತ್ತಂತೆ. ಅದೇ ಕೊಲೆಗೆ ಹೇತುವೆಂದು ಪೊಲೀಸರು ಆರೋಪಪಟ್ಟಿಯಲ್ಲಿ ಉಲ್ಲೇಖಿಸಿದ್ದರು. ಚೆಟ್ಟಿಯಪ್ಪ ಸೇನೆಯಲ್ಲಿ ಕರ್ನಲ್ ಆಗಿದ್ದು, ಕೆಲ ಸಮಯದ ಹಿಂದಷ್ಟೇ ಸ್ವಯಂ ನಿವೃತ್ತಿ ಪಡೆದಿದ್ದ.

"ಚೆಟ್ಟಿಯಪ್ಪ ಒಬ್ಬ ನಿಷ್ಠಾವಂತ ಸೇನಾಧಿಕಾರಿಯಾಗಿದ್ದ. ತನ್ನ ಸೇವಾವಧಿಯಲ್ಲಿ ಅನೇಕ